ಅಪ್ಪಾವ್ರಿಗೆ ವಯಸ್ಸಾಗಿದೆ. ತಲೆಗೂದಲೆಲ್ಲಾ ನರೆತಿದೆ. ಒಂದು ಕ್ರಮದಂತೆ ಶೇವ್ ಮಾಡದಿದ್ದುದರಿಂದ ಮುಖದಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ನೆರೆಗೂದಲುಗಳಿವೆ. ಅದರಿಂದಾಗಿ ಮುಖದಲ್ಲಿ ದೈನ್ಯಭಾವವಿದೆ. ಯಾವಾಗಲೂ ನೋಯಿಸುವಂತಹ ಸ್ವರದಲ್ಲಿ ಮೆಲ್ಲಗೆ ಮಾತನಾಡುತ್ತಾರೆ.

ದಿನವೂ ಮಧ್ಯಾಹ್ನ ಬಹಳ ಹೊತ್ತು ಮಲಗಿ ನಿದ್ದೆ ಮಾಡುವುದು ಅವರ ಪದ್ಧತಿ. ತಮ್ಮಷ್ಟೇ ವಯಸ್ಸಾಗಿರುವ ಚಿತ್ರ ವಿಚಿತ್ರ ಕೆತ್ತನೆಗಳಿರುವ ಆ ಮಂಚದಲ್ಲಿ ಒಂದು ಪಕ್ಕಕ್ಕೆ ಹೊರಳಿಕೊಂಡು ಅರ್ಧ ಮುಚ್ಚಿದ ಕಣ್ಣುಗಳೊಂದಿಗೆ ಅವರು ನಿದ್ದೆ ಮಾಡುತ್ತಿದ್ದರು. ಸಾಯಂಕಾಲ ಸ್ಕೂಲ್ ಬಿಟ್ಟು ಮಕ್ಕಳು ಮನೆಗೆ ಬಂದು ಗಲಾಟೆ ಎಬ್ಬಿಸಿದಾಗಲೂ ಅವರಿಗೆ ಎಚ್ಚರವಾಗಿರಲಿಲ್ಲ. ಕೊನೆಗೆ ತಾಯಿಯವರು ಹೋಗಿ ಅವರನ್ನು ಅಲುಗಾಡಿಸಿ 'ಗಂಟೆ ಐದಾಯಿತು' ಎಂದು ಎಬ್ಬಿಸಲು ನೋಡಿದರು.

ಅಪ್ಪಾವ್ರಿಗೆ ತಕ್ಷಣ ಎಚ್ಚರವಾಯಿತಾದರೂ ಕಣ್ಣುಗಳನ್ನು ತೆರೆಯದೇ ಹಾಗೇ ಮಲಗಿದ್ದರು. ಆ ಮೇಲೆ ಎದ್ದು ಕುಳಿತು ಒಂದು ಚುಟ್ಟವನ್ನು ಹತ್ತಿಸಿ ಮೆಲ್ಲಗೆ ಹೊಗೆ ಬಿಡುತ್ತಾ ಹೇಳಿದರು: 'ನಾನು ಬಹಳ ಹೊತ್ತು ನಿದ್ದೆ ಮಾಡಿಬಿಟ್ಟೆ ಅಲ್ಲವೇ? ಯಾಕೋ ತುಂಬಾ ಸುಸ್ತಾಗುತ್ತಿತ್ತು.'

'ಟೀ ತರಲೇ' ಆಕೆ ಕೇಳಿದರು.

'ಹುಂ.'

'ನಳಿನಿ' ಆಕೆ ಅವಳನ್ನು ಕರೆದು ಹೇಳಿದರು, 'ಅಪ್ಪಾವ್ರಿಗೆ ಟೀ ತೆಗೆದುಕೊಂಡು ಬಾ' ಎಂದರು.

ನಳಿನಿ ಒಂದು ಪುಟ್ಟ ಗ್ಲಾಸಿನಲ್ಲಿ ಟೀ ತಂದಳು.

ಅವಳು ಉದ್ದನೆಯ ಕಣ್ಣುಗಳುಳ್ಳ, ಯಾವಾಗಲೂ ಅಡಿಗೆ ಮನೆಯಲ್ಲೇ ಕೆಲಸ ಮಾಡುವವಳಾದ್ದರಿಂದ, ಕೆಂಪು ಕೆಂಪಾಗಿದ್ದ ಹುಡುಗಿಯಾಗಿದ್ದಳು. ಅವಳ ಬಟ್ಟೆಗಳು ಬಹಳ ಕೊಳೆಯಾಗಿದ್ದವು. ಅವಳು ಟೀ ತಂದು ಹೇಳಿದಳು, 'ಟೀ ಬಿಸಿಯಾಗಿದೆ.'

ಟೀ ಬಿಸಿ ಆರಿದ ನಂತರ ತಾಯಿಯವರು ಟೀ ಗ್ಲಾಸ್ ತೆಗೆದುಕೊಂಡು ಮಂಚದ ಬಳಿ ಹೋದರು. ಕಣ್ಣುಗಳನ್ನು ಮುಚ್ಚಿ ಚುಟ್ಟ ಸೇದುತ್ತಾ ಇದ್ದ ಅಪ್ಪಾವ್ರು ಹೇಳಿದರು.

'ಅಲ್ಲಿ ಇಡು. ನಾನು ಕುಡಿಯುತ್ತೇನೆ.'

ಆಕೆ ಬಾಗಿಲಿಗೊರಗಿ ಅಪ್ಪಾವ್ರ ಮುಖವನ್ನೇ ನೋಡುತ್ತಾ ನಿಂತರು. ಹಾಗೇ ಕಣ್ಣುಗಳನ್ನು ಮುಚ್ಚಿ ಚುಟ್ಟ ಸೇದುತ್ತಿರಬೇಕಾದರೆ ಆಕೆಗೆ ಆತನ ಮುಖ ವಿಷಾದದಿಂದಿರುವಂತೆ ತೋರಿತು. ಅಪ್ಪಾವ್ರು ಆಗಾಗ್ಗೆ ನಿಟ್ಟುಸಿರು ಬಿಡುತ್ತಿದ್ದರು.

ಚುಟ್ಟ ಸೇದಿ ಮುಗಿಸಿದ ನಂತರವೂ ಆತ ಮಂಚದಿಂದ ಏಳಲಿಲ್ಲ. ಆಕೆ ಜ್ಞಾಪಿಸಿದಳು.

'ಟೀ ತಣ್ಣಗಾಗಿ ಹೋಗುವುದಿಲ್ಲವೇ?'

ಅಪ್ಪಾವ್ರು ಮಂಚದಿಂದೆದ್ದು ಸ್ವಲ್ಪ ಸಡಿಲವಾಗಿದ್ದ ಮುಂಡನ್ನು ಸರಿಪಡಿಸುತ್ತಿರಬೇಕಾದರೆ ಆಕೆ ಟೀ ತೆಗೆದುಕೊಟ್ಟಳು. ಅಪ್ಪಾವ್ರು ಒಂದು ಗುಟುಕು ಕುಡಿದು ಗ್ಲಾಸ್ ಮೇಜಿನ ಮೇಲಿಟ್ಟರು.

ಆಕೆ ಕೇಳಿದಳು, 'ಏನಾಯಿತು?'

'ಏನೂ ಇಲ್ಲ.'

'ಸಕ್ಕರೆ ಹಾಕಿಲ್ಲವೇ?'

'ಹಾಕಿದೆ.'

'ಮತ್ತೇಕೆ ಕುಡಿಯುತ್ತಿಲ್ಲ?' ಆಕೆ ಟೀ ಗ್ಲಾಸನ್ನು ನೋಡುತ್ತಾ ಕೇಳಿದರು. 'ಸ್ಟ್ರಾಂಗ್ ಆಯಿತೇ?'

ಅಪ್ಪಾವ್ರು ಉತ್ತರ ಹೇಳಲಿಲ್ಲ. ಕಿಟಕಿಗೆ ಹಾಕಿದ್ದ ಪರದೆ ಸರಿಸಿ ಹೊರಗೆ ನೋಡುತ್ತಾ ನಿಂತರು. ಸಣ್ಣಗೆ ಮಳೆ ಹನಿಯುತ್ತಿದ್ದುದರಿಂದ ರಸ್ತೆ ಶೂನ್ಯವಾಗಿತ್ತು.